## ಕವಿತೆ



**ಆರ್. ದಿಲೀಪ್ ಕುಮಾರ್**

ಕಲೆ: ವಿಶ್ವನಾಥ್ ಎ.ಎಸ್.



# ಮಂದಹಾಸ ಮೀಮಾಂಸೆ

ನೆತ್ತರೋಕುಳಿಯ ನಡುವೆಯೆ ಹಾದಿ
ಮೈ ಕೈಗೆ ಮೆತ್ತಿದೆ ಬಣ್ಣ ತಲೆಯೆಲ್ಲ ಖಾಲಿ
ಊರ ಜಾತ್ರೆಯ ತುಂಬ ಉರಿವ ಕೆಂಡದ ಸವಾರಿ
ದ್ವಾರಪಾಲಕರನೂ ಕೇಳಿ,
ಗುರುವೆ, ಮುಂದೆ ಹೇಗಿದೆ ದಾರಿ?
ಕೈಲಾಸವೊ ವೈಕುಂಠವೋ ಒಂದು
ದಿನವಾದರೂ ಇರಲಿ ನನ್ನದೂ ಪಾಳಿ!
'ಕೊಕ್ಕೊಕ್ಕೋ...' ಎಂದು ಕೋಳಿ ಕೂಗುತ್ತಲಿದೆ
ಹಗಲಿರುಳೆನ್ನದೆ!

ನಿಂತ ನಿಲುವಿನ ಜೊತೆಗೆ ತ್ರಿಭಂಗಿಯ ಲಾಳಿ
ಮಾತಿನ ನಡುವೆ ಸೆಳೆದ ಉರಿವ ಪಾರಿಜಾತದ ಘಮಲು
ನಾಕು ದಿಕ್ಕಿನ ನಡು ನಡುವೆ ಎರಡು ಕಾಲ ಸವಾರಿ
ಕರುಣಿಸದಿರಯ್ಯಾ ಪ್ರಭೂ,
ಮರದ ಕೊಂಬೆ ಕೊಂಬೆಯಲಿ ಪ್ರೇತಲಾಳಿ
'ಕಾವುಮಯ್ಯ ನನ್ನು ಕರುಣಾಲವಾಲ
ದೇವಾದಿದೇವ – ಶ್ರೀವಾಸುದೇವ' ಗುನುಗಿದೆ ಸುನಾದ ವಿನೋದಿನಿ

ಮತ್ತಾಯನಂತೆ ಎತ್ತಿ ಕೈ ಮೇಲೆ ಕೂಗಿ ಕರೆದೆ
'ಪರಲೋಕದಲ್ಲಿರುವ ನಮ್ಮ ತಂದೆಯೇ
ನಮ್ಮ ಅನುದಿನದ ಆಹಾರವನ್ನು ನಮಗೆ ಕೊಡಿ'
'ನಮ್ಮನು ಶೋಧನೆಗೆ ಒಳಪಡಿಸದೆ ಕರುಣೆಯಿಂದ ರಕ್ಷಿಸಿ,
ನಮ್ಮನು ರಕ್ಷಿಸಿರಿ'
ಕೊನೆಯಲ್ಲಿ ಮತ್ತೂ ಕೂಗಿದೆ
ಈ ಹಾದಿಯಲೆಲ್ಲೂ ಕಾಣಲಿಲ್ಲ ಕರುಣಾಮೂರ್ತಿ
ನಮ್ಮವರೂ ತಿರುಗಲಿಲ್ಲ